ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೫

**ಪಟ್ಟಿ–೦೧**

# ಕರ್ನಾಟಕ ವಿಧಾನ ಪರಿಷತ್ತು

## ನೂರ ಐವತ್ತೊಂಭತ್ತನೆಯ ಅಧಿವೇಶನ

## ಸೋಮವಾರ, ದಿನಾಂಕ: ೧೭ನೇ ಆಗಸ್ಟ್, ೨೦೨೬

---

**ಸಮೂಹ – I**

೧. ಮುಖ್ಯಮಂತ್ರಿಗಳು

೨. ಸಮಾಜ ಕಲ್ಯಾಣ ಸಚಿವರು

೩. ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

೪. ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

೫. ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಸಚಿವರು

೬. ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

೭. ಉನ್ನತ ಶಿಕ್ಷಣ ಸಚಿವರು

---

## ಕಲ್ಯಾಣ ಕರ್ನಾಟಕದ ಪ್ರದೇಶದಲ್ಲಿ ಸಮಾಜ ಕಲ್ಯಾಣ ಇಲಾಖೆ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿನಿಲಯಗಳ ಕುರಿತು

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು) –**

೧ (೧೧೩) ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಸಮಾಜ ಕಲ್ಯಾಣ ಇಲಾಖೆ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಅಧೀನದಲ್ಲಿ

ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿ ನಿಲಯಗಳ ಒಟ್ಟು ಸಂಖ್ಯೆ ಎಷ್ಟು ; (ಜಿಲ್ಲಾವಾರು ಹಾಗೂ ಇಲಾಖಾವಾರು ವಿವರ ಒದಗಿಸುವುದು)

(ಆ) ಮೇಲ್ಕಂಡ ವಿದ್ಯಾರ್ಥಿನಿಲಯಗಳಲ್ಲಿ ವಾಸಿಸುತ್ತಿರುವ ಪ್ರತಿಯೊಬ್ಬ ವಿದ್ಯಾರ್ಥಿಗೆ ಸರ್ಕಾರ ವಾರ್ಷಿಕ/ಮಾಸಿಕವಾಗಿ ಒದಗಿಸುವ ಅನುದಾನ ಎಷ್ಟು ; ಆಹಾರ, ಹಾಲು, ಮೊಟ್ಟೆ, ವಸತಿ, ಸಮವಸ್ತ್ರ, ಶೌಚಾಲಯ ನಿರ್ವಹಣೆ, ಸ್ವಚ್ಛತೆ, ವಿದ್ಯುತ್, ಕುಡಿಯುವ ನೀರು, ವೈದ್ಯಕೀಯ ಸ್ಟೇಷನರಿ, ಹಾಸಿಗೆ, ಇತರೆ ಸೌಲಭ್ಯಗಳು ಸೇರಿದಂತೆ ಕಾಂಪೊನೆಂಟ್‌ವಾರು ಅನುದಾನದ ವಿವರ ಒದಗಿಸುವುದು ;

(ಇ) ಮೇಲ್ಕಂಡ ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ಸರ್ಕಾರ ನಿಗದಿಪಡಿಸಿರುವ ಆಹಾರ, ಪೌಷ್ಟಿಕ ಆಹಾರ, ಮೂಲಭೂತ ಸೌಲಭ್ಯಗಳು ಹಾಗೂ ಇತರೆ ಸೌಲಭ್ಯಗಳನ್ನು ಕಾಲಕಾಲಕ್ಕೆ ಸಮರ್ಪಕವಾಗಿ ಒದಗಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸ್ವೀಕರಿಸಲಾದ ದೂರುಗಳ ಸಂಖ್ಯೆ ಪರಿಶೀಲನೆ ನಡೆಸಿದ ವಿವರ ಹಾಗೂ ಕೈಗೊಂಡ ಕ್ರಮಗಳ ವಿವರ ನೀಡುವುದು ;

(ಈ) ೨೦೨೩-೨೪ ಹಾಗೂ ೨೦೨೪-೨೫ನೇ ಸಾಲಿನಲ್ಲಿ ಮೇಲ್ಕಂಡ ವಿದ್ಯಾರ್ಥಿನಿಲಯಗಳ ಆಹಾರ ಮತ್ತು ಇತರೆ ಸೌಲಭ್ಯಗಳಿಗಾಗಿ ಜಿಲ್ಲಾವಾರು ಎಷ್ಟು ಅನುದಾನ ಮಂಜೂರು ಮಾಡಲಾಗಿದೆ ; ಎಷ್ಟು ಅನುದಾನ ಖರ್ಚು ಮಾಡಲಾಗಿದೆ ; (ಇಲಾಖಾವಾರು ಹಾಗೂ ಜಿಲ್ಲಾವಾರು ವಿವರ ಒದಗಿಸುವುದು)

(ಉ) ವಿದ್ಯಾರ್ಥಿಗಳಿಗೆ ಸರ್ಕಾರ ನಿಗದಿಪಡಿಸಿರುವ ಎಲ್ಲಾ ಸೌಲಭ್ಯಗಳನ್ನು ಗುಣಮಟ್ಟದೊಂದಿಗೆ ನಿಯಮಿತವಾಗಿ ಹಾಗೂ ಸಮರ್ಪಕವಾಗಿ ಒದಗಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ ; ಬಾಕಿ ಉಳಿದಿರುವ ಕೊರತೆಗಳನ್ನು ನಿವಾರಿಸಲು ಸರ್ಕಾರ ಯಾವ ಕಾಲಮಿತಿಯೊಳಗೆ ಕ್ರಮ ಕೈಗೊಳ್ಳಲಾಗುವುದು ? (ವಿವರ ಒದಗಿಸುವುದು)

## ರಾಜ್ಯದಲ್ಲಿನ ಹಿಂದುಳಿದ ವರ್ಗಗಳ ಹಾಸ್ಟೆಲ್‌ಗಳ ಕುರಿತು

**ಶ್ರೀ ಕೇಶವ ಪ್ರಸಾದ್ ಎಸ್. (ವಿಧಾನಸಭೆಯಿಂದ ಚುನಾಯಿತರಾದವರು) –**

೨ (೧೪೮) ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಹಾಸ್ಟೆಲ್‌ಗಳ ಸಂಖ್ಯೆ ಎಷ್ಟು ; ಹೆಣ್ಣು ಮಕ್ಕಳ ಮತ್ತು ಗಂಡು ಮಕ್ಕಳ ಹಾಸ್ಟೆಲ್ ಸಂಖ್ಯೆ ಎಷ್ಟು ; (ಜಿಲ್ಲಾವಾರು ಸಂಪೂರ್ಣ ವಿವರ ನೀಡುವುದು)

(ಆ) ಹಿಂದುಳಿದ ವರ್ಗಗಳ ಎಲ್ಲಾ ಹಾಸ್ಟೆಲ್‌ಗಳಿಗೆ ವಾರ್ಡನ್, ಅಡುಗೆಯವರು ಮತ್ತು ವಾಚ್‌ಮೆನ್‌ಗಳ ನೇಮಕವಾಗಿದೆಯೇ ; ನೇಮಕವಾಗಿದ್ದಲ್ಲಿ , ಅವರ ವೇತನ ಶ್ರೇಣಿ ಎಷ್ಟು ; (ವಿವರ ನೀಡುವುದು)

(ಇ) ಹಾಸ್ಟೆಲ್‌ನಲ್ಲಿ ವಿದ್ಯಾರ್ಥಿಗಳು ರಾತ್ರಿ ಸಮಯದಲ್ಲಿ ಹೇಗೆ ವರ್ತಿಸುತ್ತಾರೆಂದು ಮಾಹಿತಿ ತಿಳಿಯಲು ಇರುವ ವ್ಯವಸ್ಥೆಗಳೇನು ; ಎಲ್ಲಾ ಹಾಸ್ಟೆಲ್‌ಗಳಿಗೆ ಸಿಸಿಟಿವಿ ಕ್ಯಾಮೆರಾ ಅಳವಡಿಸಲಾಗಿದೆಯೇ ; (ಸಂಪೂರ್ಣ ಮಾಹಿತಿ ನೀಡುವುದು)

(ಈ) ಈ ಹಾಸ್ಟೆಲ್‌ಗಳ ಒಟ್ಟಾರೆ ಸ್ಥಿತಿಗತಿಗಳ ಬಗ್ಗೆ ಸಮೀಕ್ಷೆ ನಡೆಸಿ ವೆಬ್‌ಸೈಟ್‌ನಲ್ಲಿ ಅಪ್ಲೋಡ್ ಮಾಡುವ ವ್ಯವಸ್ಥೆಯಿದೆಯೇ ? (ಸಂಪೂರ್ಣ ಮಾಹಿತಿ ನೀಡುವುದು)

## ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ಮುಚ್ಚುತ್ತಿರುವ ಬಗ್ಗೆ

**ಶ್ರೀ ಕೆ. ವಿವೇಕಾನಂದ (ಶಿಕ್ಷಕರ ಕ್ಷೇತ್ರ ) –**

೩ (೧೫೨) ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರು, ಮಂಡ್ಯ, ಹಾಸನ ಮತ್ತು ಚಾಮರಾಜನಗರ ಜಿಲ್ಲೆಗಳ ವ್ಯಾಪ್ತಿಯಲ್ಲಿ ೨೦೨೫–೨೬ನೇ ಸಾಲಿನಲ್ಲಿ ಎಷ್ಟು ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಕಾರ್ಯನಿರ್ವಹಿಸುತ್ತಿದ್ದವು ; (ತಾಲ್ಲೂಕುವಾರು ವಿವರವಾದ ಮಾಹಿತಿ ನೀಡುವುದು)

(ಆ) ಈ ನಾಲ್ಕು ಜಿಲ್ಲೆಗಳ ವ್ಯಾಪ್ತಿಗೆ ಬರುವ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ೨೦೨೬–೨೭ನೇ ಸಾಲಿನಲ್ಲಿ ಶೂನ್ಯ ದಾಖಲಾತಿ ಹಾಗೂ ಹಲವಾರು ಕಾರಣಗಳಿಂದ ಎಷ್ಟು ಶಾಲೆಗಳನ್ನು ಮುಚ್ಚಲು ಸರ್ಕಾರ ತೀರ್ಮಾನಿಸಿದೆ ; (ತಾಲ್ಲೂಕುವಾರು ವಿವರವಾದ ಮಾಹಿತಿ ನೀಡುವುದು)

(ಇ) ಈ ನಾಲ್ಕು ಜಿಲ್ಲೆಗಳ ವ್ಯಾಪ್ತಿಗೆ ಬರುವ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ಸರ್ಕಾರ ಹಲವಾರು ಕಾರಣಗಳಿಗೆ ಮುಚ್ಚುತ್ತಿರುವುದರಿಂದ, ಗ್ರಾಮೀಣ ಭಾಗದ ಕೆಲವು ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗುತ್ತಿದ್ದು, ಇವರುಗಳಿಗೆ ಸರ್ಕಾರ ಬೇರೆ ಯಾವ ರೀತಿಯ ವ್ಯವಸ್ಥೆಯನ್ನು ಮಾಡಲು ಉದ್ದೇಶಿಸಿದೆ ?

## ರಾಜ್ಯದ ಪ್ರೌಢಶಾಲೆಗಳಲ್ಲಿ ತೃತೀಯ ಭಾಷೆಯ ಬದಲಾಗಿ AI (ಕೃತಕ ಬುದ್ಧಿಮತ್ತೆ) ಹಾಗೂ ಇತರೆ ಶಿಕ್ಷಣ ವಿಷಯಗಳನ್ನು ಅಳವಡಿಸುತ್ತಿರುವುದರಿಂದ ವಿದ್ಯಾರ್ಥಿಗಳಿಗೆ ಆಗುತ್ತಿರುವ ಸಮಸ್ಯೆಗಳ ಕುರಿತು

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) –**

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) –**

೪ (೧೨೬+೪೭) ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಸರ್ಕಾರಿ ಪ್ರೌಢಶಾಲೆಗಳಲ್ಲಿ ತೃತೀಯ ಭಾಷೆಯಾಗಿ ದಶಕಗಳಿಂದ ಇದ್ದ ಹಲವು ಭಾಷೆಗಳ ಬದಲಿಗೆ ಇತ್ತೀಚೆಗೆ ಬೇರೆ ವಿಷಯಗಳನ್ನು ಅಳವಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಕಳೆದ ಮೂರು ವರ್ಷಗಳಲ್ಲಿ ಎಷ್ಟು ಶಾಲೆಗಳಲ್ಲಿ ಈ ಬದಲಾವಣೆ ಮಾಡಲಾಗಿದೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ತೃತೀಯ ಭಾಷೆಗಳಿಗೆ ಪರ್ಯಾಯವಾಗಿ ಈ ಹಠಾತ್ ಬದಲಾವಣೆಯಿಂದಾಗಿ ಪ್ರಸ್ತುತ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಕಲಿಕೆಯಲ್ಲಿ ಉಂಟಾಗುವ ಗೊಂದಲ ಹಾಗೂ ರಾಷ್ಟ್ರಮಟ್ಟದ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅವರಿಗೆ ಆಗುತ್ತಿರುವ ಹಿನ್ನಡೆಯನ್ನು ತಡೆಯಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಈ) NSQF ಈ ಅಡಿಯಲ್ಲಿ ದಿನಾಂಕ ೨೯/೦೭/೨೦೨೬ ರಂದು ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ–ಬೆಂಗಳೂರು ಇವರಿಂದ ಹೊರಡಿಸಲ್ಪಟ್ಟ ರಾಜ್ಯದ ಸರ್ಕಾರಿ ಪ್ರೌಢಶಾಲೆಗಳಲ್ಲಿ AI (ಕೃತಕ ಬುದ್ಧಿಮತ್ತೆ) ಶಿಕ್ಷಣವನ್ನು ಅನುಷ್ಠಾನಗೊಳಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಈ ವಿಷಯದ ಕುರಿತು ಶಿಕ್ಷಣ ತಜ್ಞರ/ ಪಾಲಕರ/ಸಾರ್ವಜನಿಕರ ಅಭಿಪ್ರಾಯ ಸಂಗ್ರಹಿಸಲಾಗಿದೆಯೇ ; ಇಲ್ಲವಾದಲ್ಲಿ ಕಾರಣವೇನು ;

(ಉ) ಹಿಂದಿ ಭಾಷೆಯ ಬದಲಾಗಿ ಹೊಸ ಭಾಷೆಗಳನ್ನು ಪರಿಚಯಿಸಿರುವ ಶಾಲೆಗಳಲ್ಲಿ ಆಯಾ ಭಾಷೆಗಳನ್ನು ಬೋಧಿಸಲು ಅರ್ಹ ಮತ್ತು ತರಬೇತಿ ಪಡೆದ ಶಿಕ್ಷಕರ ಕೊರತೆ ಇರುವುದು ನಿಜವೇ ; ಹಾಗಿದ್ದಲ್ಲಿ, ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯಕ್ಕೆ ತೊಂದರೆಯಾಗದಂತೆ ಶಿಕ್ಷಕರ ನೇಮಕಾತಿಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಊ) ದೀರ್ಘಕಾಲದಿಂದ ಸೇವೆ ಸಲ್ಲಿಸುತ್ತಿರುವ ತೃತೀಯ ಭಾಷಾ ಶಿಕ್ಷಕರಿಗೆ ಈ ಬದಲಾವಣೆಯಿಂದಾಗಿ ಕಾರ್ಯಭಾರ (work load) ಕಡಿಮೆಯಾಗಿ, ಅವರು ಕಡ್ಡಾಯ ನಿರೀಕ್ಷೆ (OOD) ಅಥವಾ ಹೆಚ್ಚುವರಿ ಪ್ರಕ್ರಿಯೆಗೆ ಒಳಗಾಗುವ ಆತಂಕ ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಶಿಕ್ಷಕರ ಹಿತರಕ್ಷಣೆಗೆ ಸರ್ಕಾರ ಕೈಗೊಂಡ ಕ್ರಮಗಳೇನು ; (ಸಂಪೂರ್ಣ ಮಾಹಿತಿ ನೀಡುವುದು)

(ಖ) ತೃತೀಯ ಭಾಷೆ ಬದಲಾಗಿ NSQF ವಿಷಯವನ್ನು ಬೋಧಿಸುವ ಬಗ್ಗೆ ರಾಜ್ಯ ಸರ್ಕಾರದ ರಾಜ್ಯಪತ್ರ ಹಾಗೂ ಮಾರ್ಗಸೂಚಿಗಳನ್ನು ಬಿಡುಗಡೆಗೊಳಿಸಲಾಗಿದೆಯೇ ? (ಈ ವಿಷಯಕ್ಕೆ ಸಂಬಂಧಪಟ್ಟಂತ ಎಲ್ಲಾ ದಾಖಲೆಗಳನ್ನು ಒದಗಿಸುವುದು)

## ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಮೊಟ್ಟೆ ವಿತರಿಸುತ್ತಿರುವ ಬಗ್ಗೆ

**ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ) –**

೫ (೫೬) ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಮೊಟ್ಟೆ ವಿತರಿಸಲು ಸರ್ಕಾರ ಒಂದು ಮೊಟ್ಟೆ ಖರೀದಿಸಲು ನಿಗದಿಪಡಿಸಿರುವ ಮೊತ್ತ ಎಷ್ಟು ;

(ಆ) ಮಾರುಕಟ್ಟೆಯಲ್ಲಿ ಮೊಟ್ಟೆ ದರ ರೂ. ೭.೫೦ ಇರುವುದರಿಂದ ಇದು ಶಿಕ್ಷಕರಿಗೆ ಆರ್ಥಿಕ ಹೊರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದಲ್ಲಿ, ಶಿಕ್ಷಕರಿಗೆ ಆರ್ಥಿಕ ಹೊರೆ ತಗ್ಗಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

## ಪದವಿಪೂರ್ವ ಉಪನ್ಯಾಸಕರು ತರಗತಿಗಳಿಗೆ ಬೋಧನೆ ಮಾಡುತ್ತಿರುವ ಬಗ್ಗೆ

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ) –**

೬ (೧೮) ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪ್ರಸ್ತುತ ಶಾಲಾ ಶಿಕ್ಷಣ ಇಲಾಖೆ(ಪದವಿ ಪೂರ್ವ) ಉಪನ್ಯಾಸಕರಿಗೆ ನಿಗದಿಪಡಿಸಿರುವ ವಿದ್ಯಾರ್ಹತೆ ಏನು ಮತ್ತು ಉಪನ್ಯಾಸಕರು ಯಾವ ತರಗತಿಗಳಿಗೆ ಬೋಧನೆ ಮಾಡುತ್ತಿದ್ದಾರೆ ; (ಸಂಪೂರ್ಣವಾದ ಮಾಹಿತಿ ನೀಡುವುದು)

(ಆ) ಪ್ರಸ್ತುತ ಶಾಲಾ ಶಿಕ್ಷಣ(ಪದವಿ ಪೂರ್ವ) ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಹೊಸ ತಿದ್ದುಪಡಿ ತರಲಾಗುತ್ತಿದೆಯೇ ; ಒಂದು ವೇಳೆ ಇಲಾಖೆ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತಂದು ಪದವಿಪೂರ್ವ ಉಪನ್ಯಾಸಕರಿಂದ ೯ ಮತ್ತು ೧೦ನೇ ತರಗತಿಗಳಿಗೆ ಬೋಧನೆ ಮಾಡಲು ಅವಕಾಶ ನೀಡಿದರೆ ಶಿಕ್ಷಣದ ಶಿಸ್ತು ಆಡಳಿತಾತ್ಮಕ ಹಕ್ಕುಗಳು ಹಾಗೂ ಇಲಾಖೆಯ ಸ್ವಾತಂತ್ರ್ಯಕ್ಕೆ ಧಕ್ಕೆಯಾಗುವುದಿಲ್ಲವೇ ; (ಸಂಪೂರ್ಣವಾದ ಮಾಹಿತಿ ನೀಡುವುದು)

(ಇ) ದಿನಾಂಕ : ೨೩.೧೨.೨೦೨೫ ರಂದು ಪದವಿಪೂರ್ವ ಕಾಲೇಜುಗಳ ಉಪನ್ಯಾಸಕ ವೃಂದದಿಂದ ಪ್ರಾಚಾರ್ಯರ ವೃಂದಕ್ಕೆ ಪದೋನ್ನತಿ ನೀಡುವ ಸಂಬಂಧ ಸಿ.ಆರ್‌ಗಳನ್ನು ಕರೆದಿದ್ದು ಆ ಪಟ್ಟಿಯಲ್ಲಿರುವ ಅನೇಕ ಉಪನ್ಯಾಸಕರು ಈಗಾಗಲೇ ನಿವೃತ್ತಿ ಹೊಂದಿದ್ದು ಇದುವರೆಗೂ ಪದೋನ್ನತಿ ನೀಡದೇ ಇರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಪದೋನ್ನತಿ ನೀಡುವ ವಿಷಯ ಯಾವ ಹಂತದಲ್ಲಿದೆ ; ಸರ್ಕಾರದಿಂದ ಯಾವ ಕಾಲಮಿತಿಯೊಳಗೆ ಪದೋನ್ನತಿ ನೀಡಲಾಗುವುದು ; (ಸಂಪೂರ್ಣವಾದ ಮಾಹಿತಿ ನೀಡುವುದು)

(ಈ) ರಾಜ್ಯದ ಪದವಿಪೂರ್ವ ಕಾಲೇಜುಗಳಲ್ಲಿ ಈಗಾಗಲೇ ಜಾರಿಯಲ್ಲಿರುವ ಕಿರುಪರೀಕ್ಷೆಗಳು, ಅರ್ಧವಾರ್ಷಿಕ ಪರೀಕ್ಷೆಗಳು ಮತ್ತು ಎರಡು ಪೂರ್ವ ಸಿದ್ಧತಾ ಪರೀಕ್ಷೆಗಳ ಜೊತೆಗೆ ೨೦೨೬–೨೭ನೇ ಸಾಲಿನಿಂದ LBA (LESSON BASED ASSESSEMENT) ಎಂಬ ಹೆಚ್ಚುವರಿ ಪರೀಕ್ಷೆಗಳನ್ನು ಪ್ರತಿ ವಿಷಯಕ್ಕೆ ೧೦ ಪರೀಕ್ಷೆಗಳಂತೆ ನಿಗದಿಪಡಿಸಿರುವ ಮಾದರಿಯಲ್ಲೇ ಕಡ್ಡಾಯವಾಗಿ ಕೈಗೊಳ್ಳಬೇಕೆಂಬ ನಿಯಮವನ್ನು ಜಾರಿಗೊಳಿಸಿದ್ದು ಈ ರೀತಿಯ ಹೆಚ್ಚು ಪರೀಕ್ಷೆಗಳಿಂದ ವಿದ್ಯಾರ್ಥಿಗಳ ವೈವಿಧ್ಯಮಯ ಕಲಿಕೆಗೆ ಬೋಧನಾ ಗುಣಮಟ್ಟ, ಬೋಧನಾ ಅವಧಿಗಳ ಮೇಲೆ ಹಾಗೂ ವಿದ್ಯಾರ್ಥಿಗಳ ಸ್ಪರ್ಧಾತ್ಮಕ ಪರೀಕ್ಷೆಯ ಸಿದ್ಧತೆಯ ಮೇಲೆ ಗಂಭೀರ ದುಷ್ಪರಿಣಾಮ ಬೀರುತ್ತಿರುವುದರ ಬಗ್ಗೆ ಸರ್ಕಾರ ಶಿಕ್ಷಣ ತಜ್ಞರ

ಜೊತೆಗೆ ಹಾಗೂ ಮನಶಾಸ್ತ್ರಜ್ಞರ ಜೊತೆಗೆ ಚರ್ಚಿಸಿದೆಯೇ ; ಚರ್ಚಿಸಿದಲ್ಲಿ, ಸದರಿಯವರು ನೀಡಿರುವ ಮಾರ್ಗದರ್ಶನಗಳೇನು ; ಇಲ್ಲದಿದ್ದಲ್ಲಿ, ಈ ರೀತಿಯ ನಿಯಮವನ್ನು ಯಾವ ಕಾರಣಕ್ಕಾಗಿ ಅನುಷ್ಠಾನಗೊಳಿಸಲಾಗಿದೆ ? (ಸಂಪೂರ್ಣ ಮಾಹಿತಿ ನೀಡುವುದು)

## ಅಕ್ರಮವಾಗಿ ವರ್ಗಾವಣೆ ಆಗಿರುವ ಹಣ ವಸೂಲು ಆಗದಿರುವ ಬಗ್ಗೆ

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) –**

೭ (೦೬) ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿದ್ದ ಅಕ್ರಮ ಹಣ ವರ್ಗಾವಣೆ ಪ್ರಕರಣದ ಸಮಗ್ರ ವಿವರ ನೀಡುವುದು ; ಅಕ್ರಮವಾಗಿ ವರ್ಗಾವಣೆಯಾಗಿರುವ ಒಟ್ಟು ಹಣ ಎಷ್ಟು ; ಈವರೆಗೆ ಎಷ್ಟು ಹಣ ವಸೂಲಾತಿ ಆಗಿದೆ ;

(ಆ) ಪ್ರಕರಣದ ತನಿಖೆ ಯಾವ ಹಂತದಲ್ಲಿದೆ ; ತನಿಖೆಯಲ್ಲಿ ಈವರೆಗೆ ಆಗಿರುವ ಪ್ರಗತಿ ಏನು ; ಯಾವ್ಯಾವ ಖಾತೆಗೆ ಹಣ ಅಕ್ರಮ ವರ್ಗಾವಣೆ ಆಗಿದೆ ; ಹಣ ವರ್ಗಾವಣೆಗೆ ಮೌಖಿಕ/ಲಿಖಿತ ಅನುಮತಿ ನೀಡಿದ್ದು ಯಾರು ; ಹಣ ವರ್ಗಾವಣೆಯ ಸ್ಟೇಟ್‌ಮೆಂಟ್ ಒದಗಿಸುವುದು ;

(ಇ) ಈ ಅಕ್ರಮ ಹಣ ವರ್ಗಾವಣೆಗೆ ಕಾರಣಕರ್ತರು ಯಾರು ; ಅವರ ವಿರುದ್ಧ ಇರುವ ಆರೋಪಗಳೇನು ; ಪ್ರಕರಣಕ್ಕೆ ಸಂಬಂಧಪಟ್ಟಂತೆ ಎಷ್ಟು ಜನರನ್ನು ಬಂಧಿಸಲಾಗಿದೆ ; ಆತ್ಮಹತ್ಯೆ ಮಾಡಿಕೊಂಡ ನಿಗಮದ ಅಧೀಕ್ಷಕರು ಬರೆದಿದ್ದ ಡೆತ್ ನೋಟ್ ಪ್ರತಿ ಒದಗಿಸುವುದು ;

(ಈ) ಬಂಧಿತ ಆರೋಪಿಗಳ ಆಸ್ತಿ ಜಪ್ತಿ ಮಾಡಲಾಗಿದೆಯೇ ; ಆಸ್ತಿ ಜಪ್ತಿಯಿಂದ ವಸೂಲಾತಿ ಆಗಿರುವ ಹಣ ಎಷ್ಟು ; ಸಂಪೂರ್ಣ ಹಣವನ್ನು ವಸೂಲಾತಿ ಮಾಡಲು ಕೈಗೊಂಡಿರುವ ಕ್ರಮಗಳೇನು ; ಸಂಪೂರ್ಣ ಹಣವನ್ನು ವಸೂಲಾತಿ ಮಾಡಲು ಸಾಧ್ಯವಾಗದಿರುವುದಕ್ಕೆ ಕಾರಣಗಳೇನು ;

(ಉ) ಈ ಪ್ರಕರಣದಲ್ಲಿ ಕೇಂದ್ರೀಯ ತನಿಖಾ ದಳ ನ್ಯಾಯಾಲಯಕ್ಕೆ ಸಲ್ಲಿಸಿರುವ ಚಾರ್ಜ್ ಶೀಟ್ ನಲ್ಲಿ ಉಲ್ಲೇಖಿಸಿರುವ ಅಂಶಗಳೇನು ?

## ಸಿಂಧನೂರು ತಾಲ್ಲೂಕಿಗೆ ಇಂಜಿನಿಯರಿಂಗ್ ಕಾಲೇಜು ಮಂಜೂರು ಮಾಡುವ ಬಗ್ಗೆ

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) –**

೮ (೨೧) ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಿಂಧನೂರು ತಾಲ್ಲೂಕಿನಿಂದ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಇಂಜಿನಿಯರಿಂಗ್ ವಿದ್ಯಾಭ್ಯಾಸಕ್ಕಾಗಿ ದೂರದ ನಗರಗಳಿಗೆ ಪ್ರಯಾಣ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ರಾಜ್ಯ ಸರ್ಕಾರದಿಂದ ಹೊಸ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಮಂಜೂರು ಮಾಡಲು ಇರುವ ಮಾನದಂಡಗಳೇನು ;

(ಇ) ಶೈಕ್ಷಣಿಕವಾಗಿ ಮುಂದುವರೆಯುತ್ತಿರುವ ಸಿಂಧನೂರು ತಾಲ್ಲೂಕಿಗೆ ಇಂಜಿನಿಯರಿಂಗ್ ಕಾಲೇಜನ್ನು ಮಂಜೂರು ಮಾಡಲು ಅಗತ್ಯವಿರುವ ಮಾನದಂಡಗಳೇನು ;

(ಈ) ಸರ್ಕಾರದಿಂದ ಸಿಂಧನೂರು ತಾಲ್ಲೂಕಿನಲ್ಲಿ ಇಂಜಿನಿಯರಿಂಗ್ ಕಾಲೇಜನ್ನು ಯಾವ ಕಾಲಮಿತಿಯೊಳಗೆ ತೆರೆಯಲಾಗುವುದು ?

## ಪ್ರಾಥಮಿಕ ಹಂತದಿಂದ ಸ್ನಾತಕೋತ್ತರ ಹಂತದವರೆಗೆ ಭಾರತದ ಸಂವಿಧಾನವನ್ನು ಕಡ್ಡಾಯ ಪಠ್ಯಕ್ರಮವಾಗಿ ಅಳವಡಿಸುವ ಕುರಿತು

**ಶ್ರೀ ಶಿವಣ್ಣ ಬಿ.ಎಸ್. (ವಿಧಾನಸಭೆಯಿಂದ ಚುನಾಯಿತರಾದವರು) –**

೯ (೫೨) ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಣದಿಂದ ಹಿಡಿದು ಸ್ನಾತಕೋತ್ತರ (Post Graduation) ಪದವಿಯವರೆಗಿನ ಎಲ್ಲಾ ಹಂತಗಳ ಶಿಕ್ಷಣದಲ್ಲಿ 'ಭಾರತದ ಸಂವಿಧಾನ'ದ ಕುರಿತಾದ ಪಾಠಗಳನ್ನು ಕಡ್ಡಾಯ ಪಠ್ಯಕ್ರಮವನ್ನಾಗಿ (Compulsory Curriculum) ಅಳವಡಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಆ) ಹಾಗಿದ್ದಲ್ಲಿ, ಪ್ರಸ್ತುತ ಯಾವ ಯಾವ ತರಗತಿಗಳಲ್ಲಿ ಸಂವಿಧಾನದ ವಿಷಯವನ್ನು ಬೋಧಿಸಲಾಗುತ್ತಿದೆ ಮತ್ತು ಅದಕ್ಕೆ ಅಂಕಗಳನ್ನು (Grading/Marks) ನಿಗದಿಪಡಿಸಲಾಗಿದೆಯೇ ; (ಸಂಪೂರ್ಣ ವಿವರ ನೀಡುವುದು)

(ಇ) ಮಕ್ಕಳಲ್ಲಿ ಮತ್ತು ಯುವಜನರಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳು, ಮೂಲಭೂತ ಹಕ್ಕುಗಳು ಹಾಗೂ ಕರ್ತವ್ಯಗಳ ಅರಿವು ಮೂಡಿಸಲು ಎಲ್ಲಾ ಶೈಕ್ಷಣಿಕ ಹಂತಗಳಲ್ಲೂ ಸಂವಿಧಾನವನ್ನು ಪ್ರತ್ಯೇಕ ವಿಷಯವಾಗಿ ಬೋಧಿಸಿ, ಪರೀಕ್ಷೆ ನಡೆಸಿ ಅಂಕ ನೀಡುವ ಪದ್ಧತಿಯನ್ನು ಕಡ್ಡಾಯವಾಗಿ ಜಾರಿಗೆ ತರಲು ಸರ್ಕಾರ ಕೈಗೊಂಡಿರುವ ಅಥವಾ ಕೈಗೊಳ್ಳಲಿರುವ ಕ್ರಮಗಳೇನು ;

(ಈ) ಈ ಯೋಜನೆಯನ್ನು ಮುಂದಿನ ಶೈಕ್ಷಣಿಕ ವರ್ಷದಿಂದಲೇ ಸಂಪೂರ್ಣವಾಗಿ ಅನುಷ್ಠಾನಗೊಳಿಸಲಾಗುವುದೇ ?

## ಮಕ್ಕಳಿಗೆ ಶೂ ಮತ್ತು ಸಾಕ್ಸ್ ವಿತರಿಸುವ ಬಗ್ಗೆ

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು) –**

೧೦ (೧೬೦) ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೨೬–೨೭ನೇ ಶೈಕ್ಷಣಿಕ ವರ್ಷದಲ್ಲಿ ರಾಜ್ಯದ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳ ಎಷ್ಟು ವಿದ್ಯಾರ್ಥಿಗಳಿಗೆ ಉಚಿತ ಶೂ ಮತ್ತು ಸಾಕ್ಸ್

ವಿತರಿಸಲು ಅನುಮೋದನೆ ನೀಡಲಾಗಿದೆ ; ಸಮಯಕ್ಕೆ ಸರಿಯಾಗಿ ವಿತರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ಜಿಲ್ಲಾವಾರು ವಿವರ ನೀಡುವುದು)

(ಆ) ಇದುವರೆಗೆ ಎಷ್ಟು ವಿದ್ಯಾರ್ಥಿಗಳಿಗೆ ಶೂ ಮತ್ತು ಸಾಕ್ಸ್ ವಿತರಿಸಲಾಗಿದೆ ; ಎಷ್ಟು ವಿದ್ಯಾರ್ಥಿಗಳಿಗೆ ಇನ್ನೂ ವಿತರಿಸಬೇಕಿದೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಶೂ ಮತ್ತು ಸಾಕ್ಸ್ ಖರೀದಿಗಾಗಿ ಸರ್ಕಾರ ಬಿಡುಗಡೆ ಮಾಡಿದ ಅನುದಾನ ಎಷ್ಟು ; ಇದುವರೆಗೆ ವೆಚ್ಚವಾದ ಮೊತ್ತವೆಷ್ಟು ;

(ಈ) ಶೂ ಮತ್ತು ಸಾಕ್ಸ್ ವಿತರಣೆಯಲ್ಲಿ ವಿಳಂಬಕ್ಕೆ ಕಾರಣಗಳೇನು ? (ಜಿಲ್ಲಾವಾರು ಮಾಹಿತಿ ನೀಡುವುದು)

## ವಿವಿಧ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳು ಮತ್ತು ಇತರೆ ವಿಷಯಗಳ ಬಗ್ಗೆ

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) –**

೧೧ (೧೦೮) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಜಿಲ್ಲಾ ಮತ್ತು ತಾಲ್ಲೂಕು ನ್ಯಾಯಾಲಯಗಳಲ್ಲಿ ಬಾಕಿ ಇರುವ ನಾಗರಿಕ ಹಾಗೂ ಕ್ರಿಮಿನಲ್ ಪ್ರಕರಣಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಆ) ರಾಜ್ಯ ಸರ್ಕಾರದ ವಿರುದ್ಧ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು ; ಅವುಗಳಲ್ಲಿ ಸರ್ಕಾರಕ್ಕೆ ಉಂಟಾದ ಆರ್ಥಿಕ ಹೊರೆ ಎಷ್ಟು ;

(ಇ) ನ್ಯಾಯಾಲಯಗಳಲ್ಲಿ ಖಾಲಿ ಇರುವ ನ್ಯಾಯಾಧೀಶರು, ಸರ್ಕಾರದ ಅಭಿಯೋಜಕರು (Public Prosecutors) ಮತ್ತು ಇತರೆ ಸಿಬ್ಬಂದಿ ಹುದ್ದೆಗಳ ಸಂಖ್ಯೆ ಎಷ್ಟು ; ಅವುಗಳನ್ನು ಯಾವಾಗ ಭರ್ತಿ

ಮಾಡಲಾಗುವುದು ; ರಾಜ್ಯ ಸರ್ಕಾರದ ಕಾನೂನು ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ; ನೇಮಕಾತಿ ಯಾವಾಗ ನಡೆಯಲಿದೆ ;

(ಈ) ಸರ್ಕಾರಿ ಭೂಮಿ, ಆಸ್ತಿ ಮತ್ತು ಒಪ್ಪಂದಗಳಿಗೆ ಸಂಬಂಧಿಸಿದ ನ್ಯಾಯಾಂಗ ವ್ಯಾಜ್ಯಗಳನ್ನು ಕಡಿಮೆ ಮಾಡಲು ಸರ್ಕಾರದ ಕಾರ್ಯತಂತ್ರವೇನು ;

(ಉ) ಕಾನೂನುಗಳ ಕನ್ನಡ ಅನುವಾದ ಸರಳೀಕರಣ ಮತ್ತು ಸಾರ್ವಜನಿಕರಿಗೆ ಸುಲಭವಾಗಿ ಲಭ್ಯವಾಗುವಂತೆ ಮಾಡಲು ಸರ್ಕಾರದ ಯೋಜನೆ ಏನು ;

(ಊ) ಕಳೆದ ಮೂರು ವರ್ಷಗಳಲ್ಲಿ ಲೋಕಾದಾಲತ್‌ಗಳ ಮೂಲಕ ಎಷ್ಟು ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗಿದೆ ; ಒಟ್ಟು ಪರಿಹಾರದ ಮೊತ್ತ ಎಷ್ಟು ?

## ಪಾಲನಾ ಸಂಸ್ಥೆಯಲ್ಲಿ ನೋಂದಣಿಯಾಗಿರುವ ಮಕ್ಕಳಿಗೆ ಮೀಸಲಾತಿ ಸೌಲಭ್ಯ ಕಲ್ಪಿಸುವ ಕುರಿತು

**ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೨ (೩೬) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಸರ್ಕಾರಿ ಬಾಲಮಂದಿರಗಳಲ್ಲಿನ ಹಾಗೂ ಬಾಲ್ಯ ನ್ಯಾಯ ಕಾಯ್ದೆ–೨೦೧೫ರ ಅಡಿ ನೋಂದಾಯಿತರಾಗಿ ಸರ್ಕಾರೇತರ ಸಂಘ ಸಂಸ್ಥೆಗಳು ನಡೆಸುತ್ತಿರುವ ಪಾಲನಾ ಸಂಸ್ಥೆ (Children's Home) ಗಳಲ್ಲಿರುವ ಪೋಷಕರಿಲ್ಲದ ಮಕ್ಕಳ ಸಂಖ್ಯೆ ಎಷ್ಟು ; (ಪ್ರತ್ಯೇಕವಾಗಿ ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಸದರಿ ಬಾಲಮಂದಿರಗಳಲ್ಲಿನ ಮತ್ತು ಪಾಲನಾ ಸಂಸ್ಥೆಗಳಲ್ಲಿನ ಪೋಷಕರಿಲ್ಲದ ಮಕ್ಕಳ ದಾಖಲಾತಿಯ ರಿಜಿಸ್ಟರ್‌ಗಳಲ್ಲಿ ಜಾತಿಯ ಕುರಿತಾಗಿ ದಾಖಲಾತಿ ಮಾಡಲಾಗಿದೆಯೇ ತಿಳಿಸುವುದು ;

(ಇ) ದಾಖಲಾತಿ ಸಂದರ್ಭದಲ್ಲಿ ಅವರ ಜಾತಿಯ ಕುರಿತಂತೆ ಮಾಹಿತಿ ಇಲ್ಲದೇ ಇರುವ ಕಾರಣಕ್ಕಾಗಿ ಅಂಥ ಮಕ್ಕಳ ಭವಿಷ್ಯದ ಹಿತದೃಷ್ಟಿಯಿಂದ ಅವರಿಗೆ ಶಿಕ್ಷಣ ಹಾಗೂ ಉದ್ಯೋಗಕ್ಕಾಗಿ ಮೀಸಲಾತಿ ದೊರಕಿಸಿಕೊಡುವ ದಿಶೆಯಲ್ಲಿ ಅಂತಹ ಮಕ್ಕಳಿಗೆ ಪರಿಶಿಷ್ಟ ಜಾತಿ ಪ್ರಮಾಣಪತ್ರ ನೀಡಿ ಪ್ರೋತ್ಸಾಹಿಸಬೇಕೆಂದು ಸಾರ್ವಜನಿಕರ ಬೇಡಿಕೆ ಇದ್ದ ಕಾರಣ ಆ ರೀತಿಯ ಪ್ರಮಾಣಪತ್ರ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

## ಗೃಹಲಕ್ಷ್ಮಿ ಯೋಜನೆಯಲ್ಲಿನ ಲೋಪಗಳ ಕುರಿತು

**ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) –**

೧೩ (೯೨) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ 'ಗೃಹಲಕ್ಷ್ಮಿ' ಯೋಜನೆಯಡಿ ಮೃತಪಟ್ಟಿರುವ 68,776 ಮಹಿಳೆಯರ ಬ್ಯಾಂಕ್ ಅಕೌಂಟ್‌ಗಳಿಗೆ ಸುಮಾರು ರೂ.79 ಕೋಟಿಗೂ ಅಧಿಕ ಹಣ (ರೂ.79,75,66,000) ಅಕ್ರಮವಾಗಿ ಪಾವತಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಮೃತಪಟ್ಟವರ ಹೆಸರಿಗೂ ದುಡ್ಡು, ಹೆಸರೇ ಇಲ್ಲದ ಬ್ಯಾಂಕ್‌ಗಳಿಗೂ ಹಣ ಪಾವತಿ ಹಾಗೂ ರಾಜ್ಯದಲ್ಲಿ ಅಸ್ತಿತ್ವದಲ್ಲೇ ಇಲ್ಲದ ಬ್ಯಾಂಕ್‌ಗಳ ಖಾತೆಗಳಿಗೂ ಗೃಹಲಕ್ಷ್ಮಿ ಯೋಜನೆಯ ಹಣ ಜಮೆಯಾಗಿರುವ ಆಘಾತಕಾರಿ ಲೋಪಗಳು ಬೆಳಕಿಗೆ ಬರಲು ಕಾರಣವೇನು ; ಒಟ್ಟು 92 ಬ್ಯಾಂಕ್‌ಗಳಿಗೆ ಈ ರೀತಿ ತಪ್ಪಾಗಿ ಹಣ ಪಾವತಿಯಾಗಿದ್ದರೂ ಇಲಾಖೆಯು ಮುಂಚಿತವಾಗಿಯೇ ದತ್ತಾಂಶಗಳ ಪರಿಶೀಲನೆ (Data Verification) ನಡೆಸದಿರಲು ಕಾರಣಗಳೇನು ;

(ಇ) ಮೃತ ಮಹಿಳೆಯರ ಖಾತೆಗಳಿಗೆ ಜಮೆಯಾಗಿರುವ ಕೋಟ್ಯಾಂತರ ರೂಪಾಯಿ ಹಣವನ್ನು ವಾಪಸ್ ಪಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; ಈಗಾಗಲೇ ಕೆಲವು ಖಾತೆಗಳಿಂದ ಎಟಿಎಂ (ATM)

ಮೂಲಕ ಹಣವನ್ನು ಡ್ರಾ ಮಾಡಿಕೊಂಡಿರುವುದು ನಿಜವೇ ; ಹಾಗಿದ್ದಲ್ಲಿ, ಮೃತರ ಹೆಸರಿನಲ್ಲಿ ಅಕ್ರಮವಾಗಿ ಹಣ ಪಡೆದ ನಕಲಿ ಫಲಾನುಭವಿಗಳು ಯಾರು ಮತ್ತು ಅವರ ವಿರುದ್ಧ ದಾಖಲಿಸಿರುವ ಕ್ರಿಮಿನಲ್ ಮೊಕದ್ದಮೆಗಳೆಷ್ಟು ;

(ಈ) ಹೊರ ರಾಜ್ಯದ ಬ್ಯಾಂಕ್‌ಗಳಿಂದ ಮೃತ ಫಲಾನುಭವಿಗಳ ಪತ್ತೆ ಕಾರ್ಯಕ್ಕೆ ಮಾಹಿತಿ ಸಿಗುತ್ತಿಲ್ಲದಿರುವುದು ನಿಜವೇ ; ಈ ಇಡೀ ಹಗರಣದ ತನಿಖೆಗಾಗಿ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಇ–ಗವರ್ನೆನ್ಸ್ ಅಧಿಕಾರಿಗಳು ನಡೆಸಿರುವ ಸಭೆಯ ತೀರ್ಮಾನಗಳೇನು ಮತ್ತು ಭವಿಷ್ಯದಲ್ಲಿ ಇಂತಹ ಲೋಪಗಳು ಮರುಕಳಿಸದಂತೆ ತಡೆಯಲು ಸರ್ಕಾರ ಕೈಗೊಂಡಿರುವ ಕಠಿಣ ತಾಂತ್ರಿಕ ಸುಧಾರಣೆಗಳೇನು ?

## ರಾಜ್ಯದ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರ ಹುದ್ದೆಗಳಿಗೆ ಬಡ್ತಿ ನೀಡುವ ಬಗ್ಗೆ

**ಶ್ರೀ ಡಿ.ಟಿ. ಶ್ರೀನಿವಾಸ್(ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ) –**

೧೪ (೧೩೭) ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಪದವಿ ಪೂರ್ವ ಕಾಲೇಜುಗಳಲ್ಲಿ 500 ಕ್ಕಿಂತ ಹೆಚ್ಚಿನ ಪ್ರಾಂಶುಪಾಲರ ಹುದ್ದೆಗಳು ಖಾಲಿಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಕೈಗೊಂಡಿರುವ ಕ್ರಮಗಳೇನು ;

(ಆ) ಪದವಿ ಪೂರ್ವ ಕಾಲೇಜು ಪ್ರಾಂಶುಪಾಲರ ಬಡ್ತಿ ಸಂಬಂಧ ಡಿಸೆಂಬರ್ 2025ರಲ್ಲಿ CRs ಸಲ್ಲಿಸಿದ್ದರೂ ಇದುವರೆಗೂ ಬಡ್ತಿ ನೀಡದಿರಲು ಕಾರಣಗಳೇನು ; ಈ ಬಗ್ಗೆ ಕ್ರಮ ಕೈಗೊಂಡಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಹುದ್ದೆಗಳನ್ನು ಭರ್ತಿ ಮಾಡಲಾಗುವುದು ;

(ಇ) ಬಡ್ತಿ ನೀಡಲು ಸರ್ಕಾರವು ವಿಳಂಬ ಮಾಡುತ್ತಿದ್ದು, ಪ್ರಾಂಶುಪಾಲರು ಬಡ್ತಿಯಿಂದ ವಂಚಿತರಾಗುವುದಿಲ್ಲವೇ ; ಇದಕ್ಕೆ ಸರ್ಕಾರದ ನಿಲುವೇನು ; (ಮಾಹಿತಿ ನೀಡುವುದು)

(ಈ) ಎಂಟು ತಿಂಗಳು ಕಳೆದರೂ ಇಲಾಖಾ ಮುಂಬಡ್ತಿ ಸಮಿತಿ ಸಭೆ DPC ಮಾಡಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು ;

(ಉ) CRs ಸಲ್ಲಿಸಿರುವ ಉಪನ್ಯಾಸಕರಲ್ಲಿ ಜುಲೈ ತಿಂಗಳ ವೇಳೆಗೆ 64 ಜನ ಉಪನ್ಯಾಸಕರು ನಿವೃತ್ತಿ ಆಗಿದ್ದು, ಇವರೆಲ್ಲಾ ಬಡ್ತಿ ಭಾಗ್ಯದಿಂದ ವಂಚಿತರಾಗಿದ್ದಾರೆ ; ಇವರಲ್ಲಿ SC/ST ಉಪನ್ಯಾಸಕರು 22 ಜನ ನಿವೃತ್ತರಾಗಿದ್ದಾರೆ, ಇದಕ್ಕೆ ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು ?

## ರಾಜ್ಯದಲ್ಲಿ ಕೋಲಿ ಸಮುದಾಯದ ಅಭಿವೃದ್ಧಿಗಾಗಿ ವಿಶೇಷ ಪ್ಯಾಕೇಜ್ ಕುರಿತು

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು) –**

೧೫ (೮೮) ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕೋಲಿ ಸಮುದಾಯದವರು ಆರ್ಥಿಕ, ಶೈಕ್ಷಣಿಕ ಮತ್ತು ಸಾಮಾಜಿಕವಾಗಿ ಅತ್ಯಂತ ಹಿಂದುಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಈ ಜನಾಂಗದ ಶೈಕ್ಷಣಿಕ ಹಾಗೂ ಸಾಮಾಜಿಕ ಅಭಿವೃದ್ಧಿಗಾಗಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ವಸತಿ ನಿಲಯಗಳ ನಿರ್ಮಾಣ, ಶಿಕ್ಷಣ ಸಂಸ್ಥೆಗಳ ಸ್ಥಾಪನೆ ಮತ್ತು ಇತರೆ ಸಮುದಾಯ ಆಧಾರಿತ ಉದ್ದೇಶಗಳಿಗಾಗಿ ಪ್ರತಿ ಜಿಲ್ಲೆಯಲ್ಲೂ ಕನಿಷ್ಟ ೫ ಎಕರೆ ಜಮೀನನ್ನು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಇ) ಕೋಲಿ ಸಮುದಾಯದ ಬಡತನ ನಿರ್ಮೂಲನೆ ಮತ್ತು ಆರ್ಥಿಕ ಸಬಲೀಕರಣಕ್ಕಾಗಿ ವಿಶೇಷ ಆರ್ಥಿಕ ಪ್ಯಾಕೇಜ್ ಘೋಷಿಸುವ ಯೋಜನೆ ಸರ್ಕಾರಕ್ಕಿದೆಯೇ ;

(ಈ) ಹಾಗಿದ್ದಲ್ಲಿ, ಜಮೀನು ಮಂಜೂರಾತಿ ಮತ್ತು ವಿಶೇಷ ಪ್ಯಾಕೇಜ್ ಬಿಡುಗಡೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

**ಜ್ಯೋತಿ**
ಕಾರ್ಯದರ್ಶಿ (ಪ್ರ.)
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ ಘಟಕ, ಬೆಂಗಳೂರು, ಕಾಸೂ – 247 ಪ್ರತಿಗಳು (ಪಿ6)

**List of Questions**
**for Oral Answers**

**Total No. of**
**Questions - 15**

# LIST - 1

# KARNATAKA LEGISLATIVE COUNCIL

## ONE HUNDRED AND FIFTY NINTH SESSION

## Monday, the 17th August, 2026

---

### GROUP - I

1. Chief Minister
2. Minister for Social Welfare
3. Minister for Scheduled Tribes Welfare
4. Minister for Backward Classes Welfare and Kannada and Culture
5. Minister for Forest, Ecology and Environment
6. Minister for School Education and Literacy
7. Minister for Higher Education

---

### HOSTELS FUNCTIONING UNDER SOCIAL WELFAE DEPARTMENT AND SCHEDULED TRIBES WELFARE DEPARTMENT IN KALYANA KARNATAKA REGION

**Smt. Hemalatha Nayak (Elected by Legislative Assembly) -**

1 (113) Will the Minister for Social Welfare be pleased to state :-

(a) the total number of hostels which are functioning under the social welfare department and scheduled tribes welfare department in Kalyana Karnataka region ; (districtwise and departmentwise details be furnished)

(b) the amount of the grant that would be provided by the Government annually/monthly for each students who are residing in the above hostels ; componentwise details of grant including food, milk, egg, accommodation, uniform, maintenance of toilets,

cleaning, electricity, drinking water, medical facility, stationery, bed and other facilities be furnished ;

(c) whether it has come to the notice of the Government that the Government prescribed food, nutritious food, basic facilities and other facilities have not been provided properly time to time for the students in the above hostels ; if so, the details of the number of complaints that have been received, the details of verification and the measure that have been taken be furnished ;

(d) the details of districtwise grant that has been sanctioned for the food and other facilities for the above hostels in the year 2025-26 and 2026-27; the grant that has been spent ; (departmentwise and districtwise details be furnished)

(e) the measures taken by the Government to provide all the facilities for students regularly and properly along with standard that has been prescribed by the Government ; the timelimit within which the measure would be taken by the Government to set right the pending shortages ? (details be furnished)

## BACKWARD CLASSES HOSTELS IN THE STATE

**Sri. Keshava Prasad S. (Elected by Legislative Assembly) -**

2 (148) Will the Minister for Backward Classes Welfare and Kannada and Culture be pleased to state :-

(a) the number of Backward classes hostels in the State ; the number of girls and boys hostels ; (districtwise complete details be furnished)

(b) whether wardens, cooks and watchmen have been appointed to all backward classes hostels ; if so, the pay scale of the same ; (details be furnished)

(c) the details of prevailing arrangements to know the behavior of students in the hostel at night ; whether CCTV cameras have been installed in all hostels ; (complete information be furnished)

(d) whether there is an arrangement to upload in the website by conducting the survey with regard to overall condition of these hostels ? (complete information be furnished)

## CLOSURE OF GOVERNMENT PRIMARY AND SECONDARY SCHOOLS

**Sri K. Vivekananda (Teachers' Constituency) -**

3 (152) Will the Minister for School Education and Literacy be pleased to state :-

(a) the number of Government primary and secondary schools which were functioning in the limits of Mysuru, Mandya, Hassan and Chamarajanagar districts during the academic year 2025-26 ; (talukwise detailed information be furnished)

(b) the number of schools for which the Government has decided to close during the academic year 2026-27 due to nil enrollment and various reasons in the Government primary and secondary schools which are coming in the limits of these four districts ; (talukwise detailed information be furnished)

(c) since the Government primary and secondary schools which are coming in the limits of these four districts are being closed for various reasons, some students of rural region are being deprived from the education hence, details of the alternative arrangement of the Government has intended to make for them ?

## HARDSHIP CAUSING FOR STUDENTS IN HIGH SCHOOLS OF THE STATE

**Sri. Shashil G. Namoshi (Teachers' Constituency) -**

**Sri. Nirani Hanamant Rudrappa (Graduates' Constituency) -**

4 (126+47) Will the Minister for School Education and Literacy be pleased to state :-

(a) whether it has come to the notice of the Government that other subjects have been introduced recently instead of various languages that have been existed from decade as third language in the Government high schools of the State ;

(b) if so, the number of schools in which these modification has been made during the last three years ; (districtwise information be furnished)

(c) the steps taken by the Government to prevent the confusion that would be caused in the learning of the students who are studying at present and the setback being caused to them in the national level competitive examinations due to this sudden modification made as an alternative to third languages ;

(d) whether it has come to the notice of the Government that AI (artificial intelligence) education is being implemented in the Government high schools of the State that has been issued by the State project director, samagra shikshana Karnataka-Bengaluru on 29/07/2026 under NSQF ; if so, whether an opinion has been collected by the educationists/parents/public regarding this matter ; if not, the reasons therefor ;

(e) whether it is true that there is a shortage of eligible and trained teachers to teach respective languages in the schools where new languages have been introduced instead of Hindi language ; if so, the measures taken by the Government for the recruitment of teachers so as not to cause hardship to the student's academic future ;

(f) whether it has come to the notice of the Government that the teachers of the third languages who were serving for a long time are facing uncertainty of undergoing compulsory waiting (OOD) or excess process due to reducing workload for them from these modifications ; (complete information be furnished)

(g) whether the gazette and guidelines of the State Government have been released with regard to teaching of NSQF subjects instead of third language ? (all documents concerned this matter be furnished)

## DISTRIBUTION OF EGGS IN GOVERNMENT SCHOOLS

**Sri. Ramojigowda (Graduates' Constituency) -**

5 (56) Will the Minister for School Education and Literacy be pleased to state :-

(a) the amount per egg that has fixed by the Government to purchase and distribute in the schools of the State ;

(b) whether it has come to the notice of the Government that the financial burden is being occurred to teachers as the price per egg is Rs.7.50/- in the market ;

(c) if so, the action taken by the Government to reduce the financial burden on teachers ?

## TEACHING TO THE CLASSES BY THE LECTURERS OF PRE-UNIVERSITY COLLEGES

**Sri. S.L. Bhojegowda (Teachers' Constituency) -**

6 (18) Will the Minister for School Education and Literacy be pleased to state :-

(a) the qualification that has been prescribed for the lecturers of department of school education (pre-university) at present and the classes for which they are teaching ; (complete information be furnished)

(b) whether new amendment is being brought for the cadre and recruitment rules of the department of school education (pre-university) at present ; if an amendment is brought to the cadre and recruitment rules and allow pre-university lecturers to teach $9^{th}$ and $10^{th}$ classes, whether it will affect educational discipline, administrative rights and the liberty of the department ; (complete information be furnished)

(c) CRs have been called with regard to providing promotion to the cadre of principals from the cadre of lecturers of

pre-university colleges on 23.12.2025 and so many lecturers who are in the list were retired already, whether it has come to the notice of the Government that the matter of the promotion has not been provided till date; if so, the present stage of the matter of promotion ; the timelimit within which the promotion would be given ; (complete information be furnished)

(d) In addition to the unit tests, mid-term examinations and two preparatory examinations, which are already existing in the pre-university colleges of the State, rule have been implemented that mandate additional LBA (lesson based assessment) examinations to be conducted from the academic year 2026-27 onwards in the prescribed pattern having 10 tests for each subject, whether the Government has discussed with academician and psychologists with regard to serious ill effect that is being affected on teaching quality for diverse learning of the students, teaching periods and the preparation for the competitive examination by the students ; if so, the guidance that have been provided by the said persons ; if not, the reasons for which such kind of rule has been implemented ? (complete information be furnished)

**REGARDING NON-RECOVERY OF MONEY LAUNDERING**

**Sri. C.T. Ravi (Elected by Legislative Assembly)**

7 (06) Will the Minister for Scheduled Tribes Welfare be pleased to state :-

(a) the complete details of money laundering case that has been occurred in the Maharshi Valmiki Development Corporation be furnished ; the total amount for the same ; the amount that has been recovered till date ;

(b) the present stage of the investigation of the case ; the details of the progress in this investigation till date ; details of the bank accounts that the money was illegally transferred ; the details of the person who have given oral/written permission for the transfer of amount ; the statement of transfer of amount be furnished ;

(c) the details of the person who is the reason for this money laundering ; the prevailing allegations against him ; the number of people who have been detained regarding the case ; the copy of the death note written by the superintendent of the corporation who have committed suicide be furnished ;

(d) whether the confiscation of property of detained accused has been made ; the amount that has been recovered by the confiscation of property ; the details of the steps taken for recovery of the complete amount ; the reasons for complete amount which is not being recovered ;

(e) the details of the facts referred in the charge sheet submitted to the court by the central bureau of investigation in this case ?

## SANCTIONING OF ENGINEERING COLLEGE TO SINDHANUR TALUK

**Sri. Basanagouda Badarli (Elected by Legislative Assembly) -**

8 (21) Will the Minister for Higher Education be pleased to state :-

(a) whether it has come to the notice of the Government that the large number of students from Sindhanur taluk are travelling to distant cities for engineering studies ;

(b) the prevailing criteria for sanctioning of new Government engineering college by the Government ;

(c) the particulars of criterias required for sanctioning of the engineering college to Sindhanur taluk which is progressing educationally ;

(d) the timelimit within which the engineering college would be commenced in Sindhanur taluk by the Government ?

## INTRODUCTION OF THE CONSTITUTION OF INDIA AS A COMPULSORY CURRICULUM FROM THE PRIMARY TO POST GRADUATION LEVEL

**Sri. Shivanna B.S. (Elected by Legislative Assembly) -**

9 (52) Will the Minister for School Education and Literacy be pleased to state :-

(a) whether the proposal of introducing the compulsory curriculum of the lessons of Constitution of India at all level of education from primary education to the post-graduation level in the State is before the Government ;

(b) if so, the particulars of classes in which the subject of the constitution is being taught at present and the marks/grading which have been prescribed for the same ; (complete details be furnished)

(c) the steps that have been taken or will be taken by the Government to compulsorily implement the system of awarding marks by conducting examinations and the teaching of the constitution as a separate subject at all educational levels, and creating awareness among the children and youths with regard to democratic values, fundamental rights and fundamental duties ;

(d) whether this scheme would be implemented from upcoming academic year completely ?

## DISTRIBUTION OF SHOES AND SOCKS TO CHILDREN

**Smt. Balkhees Banu (Elected by Legislative Assembly) -**

10 (160) Will the Minister for School Education and Literacy be pleased to state :-

(a) the number of students of the Government and aided schools of the State to whom the approval has been accorded for the distribution of free shoes and socks in the academic year 2026-27; the steps taken by the Government for the distribution of the same on time ; (districtwise details be furnished)

(b) the numbers of students to whom shoes and socks have been distributed so far ; the number of students yet to be distributed ; (districtwise information be furnished)

(c) the grant that has been released by the Government for the purchase of shoes and socks ; the amount that has been spent so far ;

(d) the reasons for the delay in the distribution of shoes and socks ? (districtwise information be furnished)

## PENDING CASES IN VARIOUS COURTS AND OTHER MATTERS

**Sri. M. Nagaraju (Elected by Legislative Assembly) -**

11 (108) Will the Chief Minister be pleased to state :-

(a) the number of civil and criminal cases which are pending in the district and taluk courts of the State ; (districtwise details be furnished)

(b) the number of cases which are pending in the courts against the State Governments ; the financial burden that has been occurred to the exchequer of the Government from the same ;

(c) the number of judges, public prosecutors and other staff posts which are lying vacant in the courts ; the date on which these posts would be filled up ; the number of posts which are lying vacant in the Law Department of the State Government ; the date on which the recruitment process would be commenced ;

(d) the strategy of the Government to reduce the judicial litigation with regard to the Government land, property and agreements ;

(e) the plan of the Government for the simplification of the Kannada translation of laws and make available of the same to the public easily ;

(f) the number of cases that have been settled through the lok adalats during the last three years; the total amount of the compensation ?

## PROVIDING RESERVATION FACILITY TO CHILDREN REGISTERED IN CHILDREN'S HOMES

**Sri. P.H. Pujar (Local Authorities Constituency) -**

12 (36) Will the Chief Minister be pleased to state :-

(a) the number of children with no parents who are residing in the Government Balamandiras of the State and

children's homes which are run by the non-Governmental organisations by registering under the Juvenile Justice Act, 2015 ; (separate districtwise information be furnished)

(b) whether the caste has been mentioned in the admission registers of children with no parents who are residing in the said Balamandiras and children's home ; if so, the details thereof ;

(c) since there is no information with regard to their caste during admission, there is a demand by the public to encourage them by issuing scheduled caste certificates for the security of such children in view of providing reservation in education and employment to them in the interest of the future of such children the step that would be taken by the Government to issue the such certificates ?

## ERRORS AND OMISSIONS IN GRUHA LAKSHMI SCHEME

**Sri. C.N. Manje Gowda (Local Authorities Constituency) -**

13 (92) Will the Chief Minister be pleased to state :-

(a) whether it has come to the notice of the Government that approximately more than Rs.79 crore (Rs.79,75,66,000) has been paid illegally for the bank accounts of 68,776 deceased women under the State Government's flagship Gruha Lakshmi scheme ;

(b) the reasons for serious errors and omissions which has been revealed that the money from the gruha lakshmi has been deposited in the names of deceased persons, disbursals made to anonymous banks and amount has been credited for the accounts of the banks which have not existed in the State ; the reasons for data verifications has not been carriedout prior by the department eventhough wrong payments have been made to 92 banks in this manner ;

(c) the measure taken by the Government to recover crores of rupees of amount that has been credited for the accounts of deceased women ; whether it is true that the amount that has been withdrawn already through ATM from various accounts ; if so, the details of fake beneficiaries who have received amount illegally in the name of the deceased persons and the number of criminal cases that have been lodged against them ;

(d) whether it is true that information is not being received from banks outside the State to trace deceased beneficiaries ; the decisions of the meeting conducted by the Chief Secretary of State, officers of the women and child development department and e-Governance for the investigation of this whole scam and the stringent technical reforms taken by the Government to prevent such errors and omissions from recurring in the future ?

## PROMOTION TO THE POSTS OF PRINCIPALS OF PRE-UNIVERSITY COLLEGES OF THE STATE

**Sri. D.T. Srinivas (D.T.S) (Teachers' Constituency) -**

14 (137) Will the Minister for School Education and Literacy be pleased to state :-

(a) whether it has come to the notice of the Government that more than 500 Principal posts are lying vacant in pre-university colleges of the State ; if so, the steps taken by the Government ;

(b) the reasons for not giving promotion so far eventhough confidential report (CRs) have been submitted in December-2025 withregard to promotion of Principals of the pre-university college ; the timelimit within which the vacant posts would be filled up ;

(c) since the delay is being caused by the Government for giving the promotion, whether the lecturers would be deprived for the promotion to Principal ; the stand of the Government in this regard ; (information be furnished)

(d) the steps taken by the Government to conduct the Departmental Promotion Committee (DPC) meeting eventhough eight months have been elapsed ;

(e) among the lecturers who have submitted the confidential report (CRs), 64 lecturers have been retired till the month of July and consequently they were deprived from benefit of promotion, among them 22 lecturers belonging into the SC/ST category have been retired, the steps taken by the Government in this regard ?

## SPECIAL PACKAGE FOR THE DEVELOPMENT OF THE KOLI COMMUNITY

**Sri. Thippanappa Kamaknoor (Elected by Legislative Assembly) -**

15 (88) Will the Minister for Backward Classes Welfare and Kannada and Culture be pleased to state :-

(a) whether it has come to the notice of the Government that the Koli community is economically, educationally and socially most backward in the State ;

(b) if so, the proposal is before the Government to grant minimum 5 acre of land in every district of the State for the construction of hostels, establishments of educational institutions and other community oriented purposes for the educational and social development of this community ;

(c) whether there is a plan before the Government to declare a special financial package for poverty alleviation and economic empowerment of the Koli community ;

(d) if so, the step would be taken by the Government to grant the land and release the special package ?

**JYOTI**
Secretary (I/c)
Karnataka Legislative Council

Government Press, Vikasa Soudha Unit, Bengaluru, WD- Copies